ಇ) ಈ ಪ್ರಕರಣದಲ್ಲಿ ಅವ್ಯವಹಾರವಾದ ಹಣದ ಮೊತ್ತವೆಷ್ಟು ಹಾಗೂ ಯಾವ ಯಾವ ಯೋಜನೆಗೆ ನಿಗದಿ ಪಡಿಸಿದೆ ಎಷ್ಟು ಹಣವನ್ನು ದುರ್ವಿನಿಯೋಗಿಸಲಾಗಿದೆ (ವಿವರ ನೀಡುವುದು)

ಈ) ಹಾಗಿದ್ದಲ್ಲಿ, ಈ ಪ್ರಕರಣಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಕಳೆದ 3 ವರ್ಷಗಳಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆದ ಅವ್ಯವಹಾರಗಳ ಸಂಖ್ಯೆ – 31.

ಆ) ಈ ಪ್ರಕರಣಗಳಲ್ಲಿ ಭಾಗಿಯಾಗಿರುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರ ಒಟ್ಟು ಸಂಖ್ಯೆ 31. ಪ್ರಕರಣದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಅನುಬಂಧ – 1 ರಲ್ಲಿ ವಿವರ ನೀಡಿದೆ.

ಈ) ಶಿಸ್ತು ಕ್ರಮ ಜಾರಿಯಲ್ಲಿರುತ್ತದೆ.

ಪ್ರಶ್ನೆ ಸಂಖ್ಯೆ 2296 ಕ್ಕೆ ಅನುಬಂಧ:-1

ಕೋಲಾರ ಜಿಲ್ಲೆ:

1. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ವಿಶೇಷ ಘಟಕ ಯೋಜನೆಗೆ ಸಂಬಂಧಿಸಿದ ರೂ. 4.56 ಲಕ್ಷ ಮೌಲ್ಯದ ಚೆಕ್ಕಿಗೆ ಹಿಂದಿನ ಪ್ರಭಾರ ತಾ.ಸ.ಕ.ಅ. ಗಳಾಗಿದ್ದ ಶ್ರೀಮತಿ ಎಂ.ಮುನಿಯಮ್ಮ ರವರ ನಕಲಿ ಸಹಿ ಮಾಡಿ ಹಣ ಡ್ರಾ ಮಾಡಿ ಅಧಿಕಾರ ದುರುಪಯೋಗ ಮಾಡಲಾಗಿದೆ

2. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಕೋಲಾರ ಇವರು ದಿನಾಂಕ 03-10-06 ರಲ್ಲಿ ನೀಡಿರುವ ವರದಿಯಂತೆ 2005-06 ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬಿಡುಗಡೆಯಾಗಿದ್ದ ಹಣ ರೂ. 525.55 ಲಕ್ಷಕ್ಕಿಂತಲೂ ಹೆಚ್ಚುವರಿಯಾಗಿ 561.00 ಲಕ್ಷ ವೆಚ್ಚ ಮಾಡಿರುತ್ತಾರೆ.

ಉಡುಪಿ ಜಿಲ್ಲೆ:-

3. ಉಡುಪಿ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿ ವಿಜಯಾ ಬ್ಯಾಂಕ್ ಕಾರ್ಕಳ ಶಾಖೆಯಲ್ಲಿ ತಾ.ಸ.ಕ.ಅ. ರವರ ಪದನಾಮದಲ್ಲಿ ನಿರ್ವಹಿಸಲಾಗುತ್ತಿದ್ದ ಉಳಿತಾಯ ಖಾತೆ ಸಂಖ್ಯೆ 13287 ರಿಂದ ಒಟ್ಟು ರೂ. 9,35,240 ಹಾಗೂ ರೂ. 2,33,000 ಮೊತ್ತದಷ್ಟು ನಗದನ್ನು 3 ಧನಾದೇಶಗಳಲ್ಲಿ ನಿಯಮಬಾಹಿರವಾಗಿ ಸೆಳೆದು ಅಧಿಕಾರ ಹಾಗೂ ಆರ್ಥಿಕ ದುರುಪಯೋಗ ಮಾಡಲಾಗಿದೆ.

ಧಾರವಾಡ ಜಿಲ್ಲೆ:-

4. ಹಲಗುಂದ ತಾಲ್ಲೂಕಿನಲ್ಲಿ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ರೂ. 1,00,000 ಹಣವನ್ನು ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್, ನವಲಗುಂದ ಈ ಶಾಖೆಯಿಂದ ದಿನಾಂಕ 22-03-06 ರಂದು ಡ್ರಾ ಮಾಡಿ ಕೋಟಾ ದಾಖಲೆ ಸೃಷ್ಟಿಸಿರುತ್ತಾರೆ.

ಚಿತ್ರದುರ್ಗ ಜಿಲ್ಲೆ:-

5. ಚಿತ್ರದುರ್ಗ ಜಿಲ್ಲೆಯಲ್ಲಿ ಜಿ.ಸ.ಕ.ಅ. ರವರು 2004 ನೇ ಸಾಲಿನಲ್ಲಿ ಕಛೇರಿಯ ಸಾದಿಲ್ವಾರು ವೆಚ್ಚಕ್ಕಾಗಿ ಅಥರೈಸಿಡ ವೆಚ್ಚ ಮಾಡಿ ಸರ್ಕಾರಕ್ಕೆ ಹೊರೆ ಉಂಟು ಮಾಡಿರುತ್ತಾರೆ.

6. ಚಿತ್ರದುರ್ಗ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಜಿ.ಸ.ಕ.ಅ.ರವರು ಕೌಶಲ್ಯ ಯೋಜನೆ ಹಾಗೂ ವಿವಿಧ ವೃತ್ತಿಪರ ಕೋರ್ಸ್‌ಗಳ ಯೋಜನೆ ಸಂಬಂಧವಾಗಿ ತರಬೇತಿಗೆ ಬಿಲ್ಲು ಪಾವತಿ ಸಂಬಂಧ ರೂ. 20,000/- ಅಕ್ರಮ ಸಂಧಾಪನೆಯನ್ನು ಪಡೆಯುವಾಗ ದಿನಾಂಕ 22-09-06 ರಂದು ಲೋಕಾಯುಕ್ತರಿಂದ ಟ್ರ್ಯಾಪ್ ಆಗಿರುತ್ತಾರೆ.

7. ಎ.ಸಿ.ಮೇ, ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, ರಾಮಚೋಗಿಹಳ್ಳಿ, ಚಳ್ಳಕೆರೆ ತಾಲ್ಲೂಕು ಇವರು ವಿದ್ಯಾರ್ಥಿಗಳ ಹಾಜರಾತಿಯನ್ನು ದಾಖಲಾತಿ ಸಂಖ್ಯೆ 56 ಇದ್ದರೂ ಹಾಜರಾತಿ ನೀಡಿದ್ದು ವಾಸ್ತವವಾಗಿ 37 ವಿದ್ಯಾರ್ಥಿಗಳು ಮಾತ್ರ ಹಾಜರಿರುತ್ತಾರೆ. ಹಾಗೂ ನಿಲಯದಲ್ಲಿ ಟ್ಯೂಬ್‌ಲೈಟ್ ವ್ಯವಸ್ಥೆ ಮಾಡಿಲ್ಲದಿರುವುದು ಹಾಗೂ ಆಹಾರ ದಾಸ್ತಾನು ಮತ್ತು ವಿತರಣೆಯನ್ನು ಪರಿಶೀಲಿಸಲಾಗಿ ಆಹಾರ ಸಾಮಗ್ರಿಗಳ ತೂಕದಲ್ಲಿ ವ್ಯತ್ಯಾಸವಿರುವುದು (ಸುಮಾರು ರೂ. 1750-00 ಗಳು) ಕಂಡು ಬಂದಿರುತ್ತದೆ.

8. ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ, ಹಿರಿಯೂರು ಇಲ್ಲಿನ ನಿಲಯ ಮೇಲ್ವಿಚಾರಕರು ಜುಲೈ 2006 ನೇ ಮಾಹೆಯಲ್ಲಿ ನಿಲಯವನ್ನು ಪ್ರಾರಂಭಿಸಲು ರೂ. 40000/- ಗಳನ್ನು ಬ್ಯಾಂಕಿನಿಂದ ತಮ್ಮ ಹೆಸರಿನಲ್ಲಿ ದಿನಾಂಕ 19-07-06 ರಲ್ಲಿ ಡ್ರಾ ಮಾಡಿ, ತದನಂತರ ಸದರಿ ಹಣ ವಿನಿಯೋಗದ ಬಗ್ಗೆ ಲೆಕ್ಕ ನೀಡದೇ ಅಂದಿನಿಂದಲೇ ಕರ್ತವ್ಯಕ್ಕೆ ಅನಧಿಕೃತವಾಗಿ ಗೈರು ಹಾಜರಾಗಿದ್ದು ಸದರಿ ಹಣವನ್ನು ನೌಕರರೇ ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

<u>ದಾವಣಗೆರೆ ಜಿಲ್ಲೆ:-</u>

9. ವಿ.ವಿ.ಮೋ. ಪ.ಪೂ.ಸಂ.ಬಾ.ವಿ.ನಿಲಯ, ಜಗಳೂರು, ದಾವಣಗೆರೆ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರತಹ ಸಂದರ್ಭದಲ್ಲಿ ನಿಲಯದ ಆಹಾರ ಸಾಮಗ್ರಿಗಳನ್ನು ಸರಬರಾಜುದಾರರಿಂದ ಖರೀದಿಸದೆ ಹಾಸಗಿ ಅಂಗಡಿಯೊಂದರಲ್ಲಿ ಖರೀದಿಸಿ, ಸದರಿ ಅಂಗಡಿಯ ಒಂದು ಬಿಲ್ಲನ್ನು ಪಡೆದು ಅದನ್ನು ಅನೇಕ ಪ್ರತಿಗಳಲ್ಲಿ ಜೆರಾಕ್ಸ್ ಮಾಡಿಸಿಕೊಂಡು 2003-04 ನೇ ಸಾಲಿಗೆ ಪೂರ್ಣವಾಗಿ ಪ್ರತಿ ಮಾಹೆಯಲ್ಲಿಯೂ ಬಳಸಿಕೊಂಡು ಬೋಗಸ್ ಬಿಲ್ಲು ತಯಾರಿಸಿ ರೂ. 1,95,919/- ಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

<u>ಹಾಸನ ಜಿಲ್ಲೆ:-</u>

10. ಸಹ ಶಿಕ್ಷಕರು, ಕೋಡಂಗಿ ಕೊಪ್ಪಲು ಇವರು ಮೂಲತಃ ಶಿಕ್ಷಣ ಇಲಾಖೆಯವ ರಾಗಿದ್ದು, ಈ ಹಿಂದೆ ನಿಯೋಜನೆ ಮೇಲೆ ಹೊಳೆನರಸೀಪುರ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ನಿಲಯ ಮೇಲ್ವಿಚಾರಕರಾಗಿ ದಿನಾಂಕ 15-09-01 ರಿಂದ 2005-06 ನೇ ಸಾಲಿನವರೆಗೆ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಅಂದಾಜು ರೂ. 1,09,275/- ಮೌಲ್ಯದ ಆಹಾರ ಪದಾರ್ಥಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ. ನೌಕರರು ದುರುಪಯೋಗ ಪಡಿಸಿಕೊಂಡಿರುವ ಮೊತ್ತ ರೂ. 1,09,275/- ರಲ್ಲಿ 59,799/- ಗಳನ್ನು ಈಗಾಗಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹೊಳೆನರಸೀಪುರ ಇವರು ವಸೂಲಿ ಮಾಡಿ ಸರ್ಕಾರಕ್ಕೆ ಜಮಾ ಮಾಡಿರುತ್ತಾರೆ. ಬಾಕಿ ಇರುವ ರೂ. 49,476/- ಗಳ ಮೊತ್ತವನ್ನು ವಸೂಲಿ ಮಾಡಲು ಹಾಗೂ ಇಲಾಖಾ ಶಿಸ್ತು ಕ್ರಮ ಜರುಗಿಸಲು ಕ್ರಮ ಕೈಗೊಳ್ಳಲಾಗಿದೆ.

11. ತಾ.ಸ.ಕ.ಅ. ಹಾಸನ ತಾಲ್ಲೂಕಿನಲ್ಲಿ ಇವರು ವಿದ್ಯಾರ್ಥಿ ನಿಲಯದ ಹುದ್ದೆಗಳು ಮಂಜೂರಾಗಿರದಿದ್ದರೂ ಸಹ ನಿಯಮ ಬಾಹಿರವಾಗಿ ಅನುಮತಿಯಿಲ್ಲದೇ ಸಾಂದರ್ಭಿಕ ನೌಕರರನ್ನು ನೇಮಿಸಿಕೊಂಡು ಇವರುಗಳಿಗೆ ಕನಿಷ್ಠ ವೇತನ ಕಾಯ್ದೆಯಡಿ ದಿನಾಂಕ 01-01-03 ರಿಂದ ಅಂದಾಜು ರೂ. 7,58,526/- ಗಳನ್ನು ಪಾವತಿಸಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುತ್ತಾರೆ.

<u>ಮೈಸೂರು ಜಿಲ್ಲೆ:-</u>

12. ತಾ.ಸ.ಕ.ಅ. ಕೆ.ಆರ್.ನಗರ ಇವರು ವಿದ್ಯಾರ್ಥಿ ವೇತನ ಹಣ ಅಂದಾಜು ರೂ. 6,44,931/- ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.

13. ತಾ.ಸ.ಕ.ಅ. ಹೆಚ್.ಡಿ.ಕೋಟೆ ಇವರು ನಗದು ಪುಸ್ತಕದ ಅಸಮರ್ಪಕ ನಿರ್ವಹಣೆ, ಇಲಾಖಾ ಕಾರ್ಯಕ್ರಮಗಳ ತಮಷ್ಕಾವಣೆ ಮಾಡಿರುವುದು ಹಾಗೂ ಜೀತ ವಿಮುಕ್ತರ ಪುನರ್ವಸತಿ ಯೋಜನೆಯಲ್ಲಿ ಅವ್ಯವಹಾರವೆಸಗಿ ಸಮರ್ಪಕವಾಗಿ ಅನುಷ್ಠಾನಗೊಳಿಸದೇ ಬೇಜವಾಬ್ದಾರಿತನ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

14. ಶಿಕ್ಷಕರು, ಸರ್ಕಾರಿ ವಸತಿ ಶಾಲೆ, ಗಾಂಧಿನಗರ, ಮೈಸೂರು ಇವರು ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ.

15. ದ್ವಿ.ದ.ಸ. ಪ್ರಥಮ ದರ್ಜೆ ಕಾಲೇಜು, ಹೆಚ್.ಡಿ.ಕೋಟೆ ರವರು ಈ ಹಿಂದೆ ಕಾಲೇಜು ವಿದ್ಯಾರ್ಥಿ ನಿಲಯದ ಪ್ರಧಾರ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಇವರು ಹಣ ದುರುಪಯೋಗ ಪಡಿಸಿಕೊಂಡಿರುವುದರಿಂದ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 221/06 ದಿನಾಂಕ 17-12-2006 ರಲ್ಲಿ ಕಲಂ 420, 465, 419, 409, 465 ಐ.ಪಿ.ಸಿ ಪ್ರಕರಣ ದಾಖಲಾಗಿರುತ್ತದೆ

<u>ಶಿವಮೊಗ್ಗ ಜಿಲ್ಲೆ :-</u>

16. ತಾಲ್ಲೂಕು ಸಮಾಜ ಕಲ್ಯಾಣ ಶಿವಮೊಗ್ಗ ತಾಲ್ಲೂಕು ಇವರು ದಿನಾಂಕ: 1-7-1984 ರ ನಂತರ ನೇಮಕಾತಿಗೊಂಡ 10 ಜನ ದಿನಗೂಲಿ ನೌಕರರಿಗೆ ಬಾಕಿ ಕನಿಷ್ಠ ವೇತನದ ಬಾಬ್ತು ಅಂದಾಜು ರೂ. 9,96,358/- ಗಳನ್ನು ಪಕ್ಷಮ ಪ್ರಾಧಿಕಾರದ ಮಂಜೂರಾತಿ ಪಡೆಯದೆಯೇ ಅಧಿಕಾರ ಮೀರಿ ಹಣ ಮಂಜೂರು ಮಾಡಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುತ್ತಾರೆ.

<u>ಗುಲ್ಬರ್ಗಾ ಜಿಲ್ಲೆ :-</u>

17. ಪ್ರ.ದ.ಸ. ತಾ.ಸ.ಕ.ಅ. ಕಛೇರಿ, ಚಿತ್ತಾಪುರ, ಗುಲ್ಬರ್ಗಾ ಜಿಲ್ಲೆ ಇವರು 02-03 ಮತ್ತು 03-04 ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಬಿಡುಗಡೆಗೊಳಿಸಲಾದ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿದ್ದು ಕಾರ್ಯಕ್ರಮಗಳಿಗೆ ಇದನ್ನು ವೆಚ್ಚ ಮಾಡಿರುವ ಬಗ್ಗೆ ಮಾಹಿತಿ /ದಾಖಲಾತಿ ನಿರ್ವಹಿಸದೇ ಹಾಗೂ ಆರೆ ಕಾಲಿಕ ಬೋಧಕರ ಗೌರವ ಧನದ ಪೊತ್ರವನ್ನು ನಿಗಧಿಗಿತ ಹೆಚ್ಚಾಗಿ ಡ್ರಾ ಮಾಡಿರುವ ಹಿನ್ನಲೆಯಲ್ಲಿ ಮೇಲ್ನೋಟಕ್ಕೆ ಹಣ ದುರುಪಯೋಗವಾಗಿರುವುದು ಕಂಡು ಬಂದಿರುತ್ತದೆ.

18. ತಾ.ಸ.ಕ.ಅ. ಯಾದಗಿರಿ ತಾಲ್ಲೂಕು ಇವರು ಪ್ರೀ ಮ್ಯಾಟ್ರಿಕ್ ಆಲಿ ಇವರ ಮನೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಕನ್ಯಾ ಮನೆ ನಿಲಯಕ್ಕಾಗಿ ದಿನಾಂಕ 15-07-04 ರಿಂದ ಮನೆ ಬಾಡಿಗೆ ಬಿಲ್ಲುಗಳನ್ನು ಪಾಸು ಮಾಡುವ ಸಂಬಂಧ ರೂ. 2500-00 ಗಳನ್ನು ಪ್ರೀ ಮ್ಯಾಟ್ರಿಕ್ ಆಲಿ ಇವರಿಂದ ಪಡೆಯುತ್ತಿದ್ದಂತಹ ಸಂದರ್ಭದಲ್ಲಿ ಲೋಕಾಯುಕ್ತರಿಂದ ಟ್ರ್ಯಾಪ್ ಆಗಿರುತ್ತಾರೆ.

19. ಕಛೇರಿ ಅಧೀಕ್ಷಕರು ತಾ.ಸ.ಕ.ಅ. ಕಛೇರಿ ಯಾದಗಿರಿ ತಾಲ್ಲೂಕು ಇವರು ಮನೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಕನ್ಯಾ ವಸತಿ ನಿಲಯಕ್ಕಾಗಿ ದಿನಾಂಕ 15-07-04 ರಿಂದ ಮನೆ ಬಾಡಿಗೆ ಬಿಲ್ಲುಗಳನ್ನು ಪಾಸು ಮಾಡುವ ಸಂಬಂಧ ರೂ. 1000-00 ಗಳನ್ನು ಪ್ರೀ ಮ್ಯಾಟ್ರಿಕ್ ಆಲಿ ಇವರಿಂದ ಪಡೆಯುತ್ತಿದ್ದಂತಹ ಸಂದರ್ಭದಲ್ಲಿ ಲೋಕಾಯುಕ್ತರಿಂದ ಟ್ರ್ಯಾಪ್ ಆಗಿರುತ್ತಾರೆ.

20. ಪ್ರ.ದ.ಸ. ತಾ.ಸ.ಕ.ಅ. ಕಛೇರಿ ಯಾದಗಿರಿ ತಾಲ್ಲೂಕು ಇವರು ಮನೆಯನ್ನು ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಕನ್ಯಾ ವಸತಿ ನಿಲಯಕ್ಕಾಗಿ ದಿನಾಂಕ 15-07-04 ರಿಂದ ಮನೆ ಬಾಡಿಗೆ ಬಿಲ್ಲುಗಳನ್ನು ಪಾಸು ಮಾಡುವ ಸಂಬಂಧ ರೂ. 500-00 ಗಳನ್ನು ಪ್ರೀ ಮ್ಯಾಟ್ರಿಕ್ ಆಲಿ ಇವರಿಂದ ಪಡೆಯುತ್ತಿದ್ದಂತಹ ಸಂದರ್ಭದಲ್ಲಿ ಲೋಕಾಯುಕ್ತರಿಂದ ಟ್ರ್ಯಾಪ್ ಆಗಿರುತ್ತಾರೆ.

<u>ಬಳ್ಳಾರಿ ಜಿಲ್ಲೆ :-</u>

21. ಜಿ.ಸ.ಕ.ಅ. ಬಳ್ಳಾರಿ ಹಾಗೂ ಹಿಂದಿನ ಪ್ರಭಾರ ತಾ.ಸ.ಕ.ಅ. ಬಳ್ಳಾರಿ (ಮೂಲತಃ ಪ್ರ.ದ.ಸ ತಾ.ಸ.ಕ.ಅ. ಕಛೇರಿ, ಬಳ್ಳಾರಿ) ಇವರುಗಳು 03-04 ಮತ್ತು 04-05 ನೇ ಸಾಲಿನಲ್ಲಿ ಭಾರತ ಸರ್ಕಾರದ ವಿದ್ಯಾರ್ಥಿ ವೇತನದ ಹಣವನ್ನು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ವಿತರಿಸದೇ ತಮ್ಮ ಹೆಸರಿನಲ್ಲಿ ಮತ್ತು ಡಿ-ಗ್ರೂಪ್ ನೌಕರರ ಹೆಸರಿನಲ್ಲಿ ಹಣ ಡ್ರಾ ಮಾಡಿ ಅಂದಾಜು ರೂ. 10,07,400/- ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.

ಬೆಂಗಳೂರು (ಪ) ಜಿಲ್ಲೆ:-

22. ತಾ.ಸ.ಕ.ಅ. ಬೆಂಗಳೂರು (ದ) ತಾಲ್ಲೂಕು ಇವರು 2003-04 ನೇ ಸಾಲಿನಲ್ಲಿ ಭಾರತೀಯ ಸಂಸ್ಕೃತಿ ವಿದ್ಯಾಪೀಠ ವಿಜಯನಗರ ಇಲ್ಲಿನ ವಿದ್ಯಾರ್ಥಿಗಳಿಗೆ ಪುರಸ್ಕಾರ ಹಣವಾಗಿ ವಾರ್ಷಿಕವಾಗಿ 100 ರೂ.ಗಳನ್ನು ಮಂಜೂರು ಮಾಡುವ ಬದಲು 500 ರೂ.ಗಳನ್ನು ಮಂಜೂರು ಮಾಡಿ ಅಧಿಕಾರ ದುರುಪಯೋಗ ಪಡಿಸಿಕೊಂಡಿರುತ್ತಾರೆ.

23. ತಾ.ಸ.ಕ.ಅ. ಬೆಂಗಳೂರು (ಉ) ತಾಲ್ಲೂಕು ಇವರು ಭಾರತೀಯ ಸಂಸ್ಕೃತಿ ವಿದ್ಯಾಪೀಠ ಕಲಾ ಮತ್ತು ವಾಣಿಜ್ಯ ಮಹಾ ಕಾಲೇಜು ಇಲ್ಲಿ ವ್ಯಾಸಂಗ ಮಾಡದೇ ಇರುವ ಅಭ್ಯರ್ಥಿಗಳಿಗೆ ವಿವಾಕಾರಣ ವಿದ್ಯಾರ್ಥಿ ವೇತನ ಮಂಜೂರು ಮಾಡಿ ಅಧಿಕಾರ ಹಾಗೂ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆ:-

24. ಜಿ.ಸ.ಕ.ಅ. ದಕ್ಷಿಣ ಕನ್ನಡ ಜಿಲ್ಲೆ ಇವರು ವಿಲಯಗಳಿಗೆ ಅವಶ್ಯಕವಾದ ಸಾಮಗ್ರಿಗಳನ್ನು ಖರೀದಿಸುವುದಕ್ಕೆ ಸಂಬಂಧಿಸಿದಂತೆ ನಿಯಮಾನುಸಾರ ಟೆಂಡರ್ ಕರೆಯದೆಯೇ ಸರ್ಕಾರಕ್ಕೆ ಆರ್ಥಿಕ ಸಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

ರಾಯಚೂರು ಜಿಲ್ಲೆ:-

25. ಕಛೇರಿ ಅಧೀಕ್ಷಕರು, ತಾ.ಸ.ಕ.ಅ. ಕಛೇರಿ, ಮಾನ್ವಿ. ಹಾಗೂ ಪ್ರ.ದ.ಸ. ತಾ.ಸ.ಕ.ಅ. ಕಛೇರಿ, ಮಾನ್ವಿ ಮತ್ತು ದ್ವಿ.ದ.ಸ. ತಾ.ಸ.ಕ.ಅ. ಕಛೇರಿ, ಮಾನ್ವಿ ಇವರುಗಳು ವಿದ್ಯಾರ್ಥಿ ವೇತನದ ಹೊಸ ಸಿ.ಡಿ. ಖಾತೆಯ ಚೆಕ್ಕುಗಳನ್ನು ವಳಲು ಸಹಿ ಮಾಡಿ 4,59,945 ಹಾಗೂ ಕಛೇರಿಯ ಉಳಿತಾಯ ಖಾತೆಯಿಂದ ಡ್ರಾ ಮಾಡಿದ ರೂ. 30,000 ಗಳ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ.

ಬಾಗಲಕೋಟೆ ಜಿಲ್ಲೆ:-

26. ಜಿ.ಸ.ಕ.ಅ. ಬಾಗಲಕೋಟೆ ಇವರು ಶ್ರೀ ಹನುಮಾನ್ ಖಾದಿ ಗ್ರಾಮೋದ್ಯೋಗ ಸಂಘ, ಬುದ್ನಿ.ಕೆ.ಡಿ. ಮುಧೋಳ ತಾಲ್ಲೂಕು ಇಲ್ಲಿ ಚರ್ಮ ಉತ್ಪಾದನಾ ಘಟಕ ಸ್ಥಾಪಿಸಲು ಸರ್ಕಾರದಿಂದ ಬಿಡುಗಡೆಯಾಗಿದ್ದ ರೂ. 15.25 ಲಕ್ಷದಲ್ಲಿ ರೂ. 10.40 ಸಲವನ್ನು ಸಂಘದ ಅಧ್ಯಕ್ಷರಾದ ಶ್ರೀ ಮಾರುತಿ.ಡಿ.ಸನ್ನಿಗೇರಿ ಇವರು ಘಟಕ ಸ್ಥಾಪಿಸದೇ ಹಣ ದುರುಪಯೋಗ ಪಡಿಸಿಕೊಂಡಿರುವುದು ಕಂಡು ಬಂದಿದು ಈ ದುರುಪಯೋಗಕ್ಕೆ ಜಿ.ಸ.ಕ.ಅ. ರವರು ಕಾರಣರಾಗಿರುತ್ತಾರೆ.

ತುಮಕೂರು ಜಿಲ್ಲೆ:-

27. ತಾ.ಸ.ಕ.ಅ. ಪಾವಗಡ ತಾಲ್ಲೂಕು ವಿ.ಹ.ಯೋಯ ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಸಹಾಯಧನ ಮಂಜೂರು ಮಾಡಲು ಫಲಾನುಭವಿಗಳ ಪರವಾಗಿ ಶ್ರೀ ಕುಮಾರ್, ಕೆಂಚನಹಳ್ಳಿ ಎಂಬುವವರಿಂದ ದಿನಾಂಕ 18-05-2005 ರಂದು ರೂ. 4000-00 ಲಂಚ ಪಡೆಯುವ ಸಂದರ್ಭದಲ್ಲಿ ಲೋಕಾಯುಕ್ತರಿಂದ ಟ್ರಾಪ್ ಆಗಿರುತ್ತಾರೆ.

28. ತಾ.ಸ.ಕ.ಅ. ತಿರಾ ತಾಲ್ಲೂಕು ಶ್ರೀ ಪಾಗಭೂಷಣ್, ಆಡುಗೆ ಸಹಾಯಕರು ಇವರಿಂದ ರಜಾ ವೇತನ ಬಿಡುಗಡೆಗೆ ಸಂಬಂಧಿಸಿದಂತೆ ದಿನಾಂಕ 26-12-06 ರಂದು ರೂ. 2000-00 ಲಂಚ ಪಡೆಯುತ್ತಿದ್ದ ಸಮಯದಲ್ಲಿ ಲೋಕಾಯುಕ್ತರಿಂದ ಟ್ರಾಪ್ ಆಗಿರುತ್ತಾರೆ.

ಬೀದರ್ ಜಿಲ್ಲೆ:-

29. ತಾ.ಸ.ಕ.ಅ. ಕಛೇರಿ, ಔರಾದ್ ತಾಲ್ಲೂಕು, ಬೀದರ್ ಜಿಲ್ಲೆ ಇವರು ಚಂದ್ರಹಾಸ ಪಾಟೀಲ್ ಕರಿಯ ಪ್ರಾಥಮಿಕ ಶಾಲೆ ಇಲ್ಲಿಗೆ ವಿದ್ಯಾರ್ಥಿ ವೇತನವು ಮಂಜೂರಾಗಿದ್ದು ಮಂಜೂರಾತಿಯ ಹಣ ನೀಡಲು ಶ್ರೀ

ಪಂಡರಿ ತಂದೆ ಗುಂಡಪ್ಪ ಗೌಡ ರವರಿಂದ ರೂ. 1500-00 ಗಳ ಆಕ್ರಮ ಸಂಧಾನವನ್ನು ಪಡೆಯುವಾಗ ದಿನಾಂಕ 17-03-06 ರಂದು ಲೋಕಾಯುಕ್ತರಿಂದ ಟ್ರ್ಯಾಪ್ ಆಗಿರುತ್ತಾರೆ.

ಬೆಳಗಾವಿ ಜಿಲ್ಲೆ :-

30. ಕಛೇರಿ ಅಧೀಕ್ಷಕರು ತಾ.ಸ.ಕ.ಅ. ಕಛೇರಿ, ಚಿಕ್ಕೋಡಿ, ತಾಲ್ಲೂಕು ಇವರು 2005-06 ನೇ ಸಾಲಿನಲ್ಲಿ ರಾಜ್ಯ ಸರಕಾರದಿಂದ ಬಿಡುಗಡೆಯಾದ ಅಂತರ್ ಜಾತಿ ವಿವಾಹಿತರ ಪ್ರೋತ್ಸಾಹ ಧನವನ್ನು ಫಲಾನುಭವಿಗಳಾದ ಶ್ರೀ ಬಸನಗೌಡ ನಿರಮಲ್ಲಪ್ಪ ಕರಿಪಣ್ಣವರ ಮತ್ತು ಶ್ರೀಮತಿ ಆಶಾ ಗೋಪಾಲ ಕದಂ ದಂಪತಿಗಳಿಗೆ ವಿತರಿಸುವಾಗ ಅವರಿಂದ ದಿನಾಂಕ 29-04-06 ರಂದು ರೂ. 1500-00 ಗಳ ಲಂಚ ಸ್ವೀಕರಿಸುತ್ತಿರುವಾಗ ಲೋಕಾಯುಕ್ತರಿಂದ ಟ್ರ್ಯಾಪ್ ಆಗಿರುತ್ತಾರೆ.

31. ಸಮಾಜ ಕಲ್ಯಾಣ ಇಲಾಖೆಯ ಒಂದಿನ ಆಯುಕ್ತರ ಅವಧಿಯಲ್ಲಿ ಲೋಕಾಯುಕ್ತರ ದಾಳಿ ಸಂದರ್ಭದಲ್ಲಿ ಕಂಡುಬಂದ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಮಾನ್ಯ ಲೋಕಾಯುಕ್ತರಿಂದ ವರದಿ ಬಂದಿದೆ.

2078 (2532) ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗಾ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಅನೇಕ ಗ್ರಾಮಗಳಲ್ಲಿ ಪರಿಶಿಷ್ಟ ಜನಾಂಗದವರಿಗೆ ಕುಡಿಯುವ ನೀರಿನ ಪೂರೈಕೆ ವಿಷಯದಲ್ಲಿ ಗ್ರಾಮದಿಂದ ಬಹಿಷ್ಕಾರ ಹಾಗೂ ಹೋಟೆಲುಗಳಲ್ಲಿ ಪ್ರವೇಶ ನಿರಾಕರಿಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ 3 ವರ್ಷಗಳಲ್ಲಿ ಈ ರೀತಿಯ ಎಷ್ಟು ಪ್ರಕರಣಗಳು ದಾಖಲಾಗಿವೆ (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು);

ಇ) ಈ ರೀತಿಯ ಬಹಿಷ್ಕಾರ ಹಾಗೂ ಪ್ರವೇಶ ನಿರಾಕರಿಸಿದ ಪ್ರಕರಣಗಳನ್ನು ಗುರುತಿಸಿ ಸರ್ಕಾರವು ಅಂತಹವರ ಮೇಲೆ ಮೊಕದ್ದಮೆಯನ್ನು ಹೂಡಲಾಗಿದೆಯೇ;

ಈ) ಹಾಗಿದ್ದಲ್ಲಿ, ಇದನ್ನು ನಿವಾರಿಸಲು ಪರಿಶಿಷ್ಟ ಜನಾಂಗದವರಿಗೆ ಪ್ರತ್ಯೇಕವಾದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಾಲಚಂದ್ರ ಲ.ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ 6 ಪ್ರಕರಣಗಳು ವರದಿಯಾಗಿವೆ. ಅವುಗಳ ವಿವರ ಈ ಕೆಳಕಂಡಂತಿರುತ್ತದೆ.